ಕರ್ನಾಟಕ ವಿಧಾನ ಸಭೆ

ಶುಕ್ರವಾರ ೭ನೇ ಡಿಸೆಂಬರ್ ೧೯೯೦

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯–೪೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಆವರು ಪೀಠವನ್ನು ಅಲಂಕರಿಸಿದ್ದರು.

ಪ್ರಮಾಣ ವಚನ ಸ್ವೀಕಾರ

ತಿಕೋಟ ಮತಕ್ಷೇತ್ರದಿಂದ ಆಯ್ಕೆಯಾಗಿ ಬಂದ ಶ್ರೀ ಎಂ. ಬಿ. ಪಾಟೀಲ್ ಆವರು ಭಗವಂತನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ :– 22ನೇ ಹೆಚ್ಚಿನ ನಗರ ದಿವಾಣಿ ಮತ್ತು ಸತ್ರ ನ್ಯಾಯಾಲಯಕ್ಕೆ ವರ್ಗಾವಣೆಯಾದ ಮೊಕದ್ದಮೆ ಸಂಖ್ಯೆಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 270 (580)

ಶ್ರೀ ಪೇರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಿರ್ದಿಷ್ಟವಾಗಿ ವರದಕ್ಷಿಣೆಯ ಸಾವುಗಳು ಮತ್ತು ಮಹಿಳೆಯರ ಮೇಲೆ ನಡೆಯುವ ಘೋರ-ಕೃತ್ಯಗಳ ಮೊಕದ್ದಮೆಗಳನ್ನು ವ್ಯವಹರಿಸುವ ಸಲುವಾಗಿ ಸ್ವಾತಂತ್ರ್ಯ ದಿನದಂದು 22ನೇ ಹೆಚ್ಚಿನ ನಗರ ದಿವಾಣಿ ಮತ್ತು ಸತ್ರ ನ್ಯಾಯಾಲಯವನ್ನು ಸರ್ಕಾರವು ಸ್ಥಾಪಿಸಲಾಗಿದೆಯೆ ?

ಆ) ಹಾಗಿದ್ದರೆ, ಮೇಲಿನ ಹೊಸ ನ್ಯಾಯಾಲಯಕ್ಕೆ ನಗರದ ದಿವಾಣಿ ಮತ್ತು ಗ್ರಾಮಾಂತರ ಬೇರೆ ಬೇರೆ ನ್ಯಾಯಾಲಯಗಳಿಂದ ವರ್ಗಾವಣೆ ಯಾದ ಮೊಕದ್ದಮೆಗಳ ಸಂಖ್ಯೆ ಎಷ್ಟು ?

ಇ) ಈ ಹೊಸ ನ್ಯಾಯಾಲಯದಿಂದ ಈ ವರೆಗೆ ಇತ್ಯರ್ಥವಾದ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ಹೌದು. ದಿನಾಂಕ 18ನೇ ಆಗಸ್ಟ್ 1990 ರಿಂದ ಕಾರ್ಯನಿರ್ವಹಿಸುತ್ತಿದೆ.

ಆ) ಬೆಂಗಳೂರು ನಗರದ ದಿವಾಣಿ ಮತ್ತು ಗ್ರಾಮಾಂತರದ ಬೇರೆ ಬೇರೆ ನ್ಯಾಯಾಲಯಗಳಿಂದ ಈ ಕೆಳಕಂಡಂತೆ ಪ್ರಕರಣಗಳು ವರ್ಗಾವಣೆಯಾಗಿದೆ :–

ಪ್ರಕರಣ	1ನೇ ಹೆಚ್ಚಿನ ನಗರ ದಿವಾಣಿ ಮತ್ತು ಸತ್ರನ್ಯಾಯಾಲಯ	6ನೇ ಹೆಚ್ಚಿನ ನಗರ ದಿವಾಣಿ ಮತ್ತು ಸತ್ರನ್ಯಾಯಾಲಯ	7ನೇ ಹೆಚ್ಚಿನ ನಗರ ದಿವಾಣಿ ಮತ್ತು ಸತ್ರನ್ಯಾಯಾಲಯ	ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಎಸ್. ಸಿ.	9	43	22	56
ಕ್ರಿಮಿನಲ್ ಮಿಸಲೇನಿಯಸ್	—	1	—	—
ಕ್ರಿಮಿನಲ್ ಅಪೀಲ್	—	—	1	—
ಮಿಸಲೇನಿಯಸ್	—	—	—	9